ತಿಳಿದಿರಲಿಲ್ಲ. ನಮ್ಮನ್ನು ನೋಡಿಕೊಳ್ಳದಿದ್ದರೂ ಚಿಂತೆಯಿಲ್ಲ... ನಮ್ಮ ಮಗ ಸೊಸೆ, ಮೊಮ್ಮಗಳಿಗೆ ಯಾವುದೇ ತೊಂದರೆಯಾಗದಂತೆ ಅವರು ಸುಖವಾಗಿ ಇದ್ದರೆ ಸಾಕು, ನಾವು ಎಂದಾದರೊಂದು ದಿನ ಬಿದ್ದುಹೋಗುವ ಮರಗಳು ಎಂದು ಇಬ್ಬರೂ ದೇವರಲ್ಲಿ ಪದೇ ಪದೇ ಪ್ರಾರ್ಥಿಸುತ್ತಿದ್ದರು.

★★★

ಮರದ ಕೊಂಬೆಯಲ್ಲಿ ಜೋತಾಡುತ್ತಿದ್ದ ಹಲಸಿನ ಹಣ್ಣುಗಳನ್ನು ನೋಡಿದ ಚನ್ನಪ್ಪನಿಗೆ ಒಂದು ಹಣ್ಣನ್ನಾದರೂ ಮನೆಗೆ ತೆಗೆದುಕೊಂಡು ಹೋಗೋಣವೆನ್ನಿಸಿ ಮರ ಹತ್ತಿ ಹಣ್ಣು ಕೀಳಲು ಯಾರಾದರೂ ಸಿಗುವರೇನೋ ಎಂದು ಸುತ್ತಲೂ ನೋಡಿದ. ಪಕ್ಕದ ಹೊಲದಲ್ಲಿ ಕಳೆ ಕೀಳುತ್ತಿದ್ದ ಯುವಕ ಕೆಂಪನನ್ನು ಕಂಡು ಅವನ ಬಳಿಗೆ ನಡೆದು ಹೋಗಿ, ''ಲೇ ಕೆಂಪಾ... ಬಾರ್ಲಾ ಇಲ್ಲೀ...'' ಎಂದ. ಕಳೆ ಕೀಳುತ್ತಿದ್ದ ಕೆಂಪ ತಲೆಯೆತ್ತಿ, ''ಏನಯ್ಯಾ...'' ಎಂದು ಕೇಳಿದ. ''ಬಾರ್ಲಾ ಇಲ್ಲೀ... ಒಂದು ಹಲಸಿನ ಹಣ್ಣು ಕಿತ್ತು ಕೊಡು... ನನ್ನ ಕೈಲಿ ಮರ ಹತ್ತಕ್ಕೆ ಆಗಲ್ಲ...'' ಎಂದು ಅಲವತ್ತುಕೊಂಡ ಚನ್ನಪ್ಪನ ಮಾತಿಗೆ ಪ್ರತ್ಯುತ್ತರ ನೀಡದೆ ಕೆಂಪ ಚನ್ನಪ್ಪನ ಹೊಲಕ್ಕೆ ಬಂದು ಹಲಸಿನ ಮರ ಹತ್ತಿದ. ಚನ್ನಪ್ಪ ಕೊಂಬೆಯ ಮೇಲಿದ್ದ ಎರಡು ಹಣ್ಣುಗಳನ್ನು ತೋರಿಸಿ, ''ಅವೆರಡನ್ನೂ ಕಿತ್ತು ಹಾಕೋ...'' ಅಂದ. ಕೆಂಪ ಒಂದೊಂದೇ ಹಣ್ಣು ಕಿತ್ತು ನೆಲಕ್ಕೆ ಬಿಸಾಡದೆ ಮರದ ಬೊಡ್ಡೆಯ ಬಳಿ ಬಂದು ಚನ್ನಪ್ಪನಿಗೆ ನೀಡಿ ಮರ ಇಳಿದ. ''ತಗೋಳೋ... ನೀನು ಒಂದು ತಗಂಡು ಹೋಗು...'' ಎಂದ ಚನ್ನಪ್ಪ. ಕೆಂಪನಿಗೆ ಇನ್ನಿಲ್ಲದ ಸಂತೋಷವಾಯಿತು. ''ಆಯ್ತು ಕಣಯ್ಯಾ...'' ಎಂದವನು ಒಂದು ಹಲಸಿನ ಹಣ್ಣನ್ನು ಎತ್ತಿ ಹೆಗಲ ಮೇಲಿಟ್ಟುಕೊಂಡು ನಡೆದ.

ಮಧ್ಯಾಹ್ನದ ಊಟದ ಸಮಯದಲ್ಲಿ ಚನ್ನಪ್ಪ ಮನೆಗೆ ತಂದ ಘಮಗುಡುತಿದ್ದ ಹಲಸಿನ ಹಣ್ಣನ್ನು ಕಂಡು ಪುಟ್ಟಕ್ಕನ ಮನದಲ್ಲಿ ಮೊಮ್ಮಗಳು ದಿಶಾ ಐದಾರು ವರ್ಷದವಳಿದ್ದಾಗ ತನ್ನ ಮಡಿಲಲ್ಲಿ ಕುಳಿತು ಹಲಸಿನ ತೊಳೆಗಳನ್ನು ಚಪ್ಪರಿಸಿ ತಿಂದದ್ದು ನೆನಪಾಗಿ ಆಲೋಚನೆಯೊಂದು ಮೂಡಿ, ''ಹಣ್ಣು ಭಾಳ ಚೆನ್ನಾಗದೆ... ಬೆಂಗಳೂರಿಗೆ ಹೋಗಿ ಕೊಟ್ಟು ಬರೋಗು... ಆ ಮಗೀಗೆ ಹಲಸಿನ ಹಣ್ಣು ಅಂದ್ರೆ ಇಷ್ಟ... ಎಷ್ಟು ವರ್ಷ ಆಯ್ತೋ ತಿಂದು...'' ಎಂದಳು. ಚನ್ನಪ್ಪ ಒಂದು ಕ್ಷಣ ಉತ್ತರಿಸಲಿಲ್ಲ. ನಂತರ, ''ಮನೇಲಿ ಯಾರು ಇರ್ತರೋ ಇಲ್ವೋ... ಅವರ ಪಾಡೇನೋ...'' ಎಂದು ನಿಟ್ಟುಸಿರುಬಿಟ್ಟ. ''ನಾಳೆ ಹೆಂಗಿದ್ರೂ ಭಾನುವಾರ... ಯಾರಾರ ಮನೇಲಿ ಇದ್ದೇ ಇರ್ತಾರೆ... ತಗಂಡೋಗಿ ಕುಯ್ದು ತೊಳೆ ಬಿಡ್ಸಿ ಕೊಟ್ಟು ಬರೋಗು... ನನ್ನ ಮೊಮ್ಮಗಳಾದ್ರೂ ತಿನ್ನಲಿ... ಚಂದ್ರಂಗೆ ಫೋನು ಮಾಡಿ ಕೊಡು... ನಿಮ್ಮಪ್ಪ ನಾಳೆ ಬರ್ತಾವ್ರೆ... ಯಾಕೋ ನೋಡಂಗಾಗದೆ ಅಂತಾವ್ರೆ ಅಂತ ಹೇಳ್ತೀನಿ...'' ಎಂದು ಪುಟ್ಟಕ್ಕ ಒತ್ತಾಯಿಸಿದಳು. ಮಗನಿಗೆ ಫೋನು ಮಾಡಿ ಅಪ್ಪ ನೋಡಲು ಬರುತ್ತಿದ್ದಾರೆಂದು ವಿಷಯ ತಿಳಿಸಿ ಮಗನ ಅನುಮತಿಯನ್ನೂ ಪಡೆದುಕೊಂಡಳು. ಹಲಸಿನ ಹಣ್ಣು ಕೊಂಡೊಯ್ಯುತ್ತಿರುವ ವಿಷಯವನ್ನು ಮಾತ್ರ ಮಗನಿಗೆ ಹೇಳಲಿಲ್ಲ. ತರುವುದು ಬೇಡ ಎನ್ನುತ್ತಾನೆ ಎನ್ನುವ ಭಯ ಪುಟ್ಟಕ್ಕನದ್ದು.

ಚನ್ನಪ್ಪ ಬೆಳ್ಳಂಬೆಳಗ್ಗೆಯೇ ಎದ್ದು ಸಂತೆಯಿಂದ ಸಾಮಾನು ತರಲೆಂದು ಇಟ್ಟುಕೊಂಡಿದ್ದ ದೊಡ್ಡ ಬಿಳಿಯ ಬಟ್ಟೆಯ ಬ್ಯಾಗಿನಲ್ಲಿ ಹಲಸಿನ ಹಣ್ಣನ್ನು ಇಟ್ಟುಕೊಂಡು ಸೀಟು ಆಟೊ ಹತ್ತಿ ಕುಣಿಗಲ್ ತಲುಪಿ ಖಾಸಗಿ ಬಸ್ಸಿಗಾಗಿ ಕಾಯತೊಡಗಿದ. ಬಸ್ಸು ಬರಬೇಕಾದ ಸಮಯ ಕಳೆದು ಒಂದು ಗಂಟೆ ಕಳೆದರೂ ಬರಲಿಲ್ಲ. ಮರುದಿನವಿದ್ದ ಚುನಾವಣಾ ಕರ್ತವ್ಯದ ಸಲುವಾಗಿ ಬೇರೆ ಗವರ್ಮೆಂಟ್ ಬಸ್ಸುಗಳೂ ಬರಲಿಲ್ಲ. ಕಾಯ್ದು ಕಾಯ್ದು ಸುಸ್ತಾದ ಚನ್ನಪ್ಪನಿಗೆ ಲೇಟಾಗಿ ಹೋದರೆ ಮಗನ ಮನೆಯಲ್ಲಿ ಯಾರೂ ಇರದಿದ್ದರೆ ಏನು ಮಾಡುವುದು ಮತ್ತು ಊರಿಗೆ ವಾಪಸು ಹೋಗಿ